doc-410
T.P-2

(1)

R No KRNN 12

2-12-1974

ಸ್ವರ್ಣ ಮಹೋತ್ಸವ ನೆರವೇರಿದ ಪತ್ರಿಕೆ

in ★ ★ ★ ★ ★

58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಸ್ಥಾಪಕರು: ಅರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಜಾಸಾರಥಿ ಎಂ. ಎಸ್. ಕೃಷ್ಣರಾವ್ [3 ಕೆ

ರಾಜ್ಯಗಳಿಗೆ ಕೇಂದ್ರದ ಸಹಾಯ

ಕರ್ನಾಟಕಕ್ಕೆ ಜಯಪ್ರಕಾಶರು

ಮೈಸೂರು— ಕರ್ನಾಟಕ ನವನಿರ್ಮಾಣ ಕ್ರಾಂತಿ ನಿಯೋಗವು ಡೆಲ್ಲಿಯಲ್ಲಿ ಶ್ರೀ ಜಯಪ್ರಕಾಶ ನಾರಾಯಣರನ್ನು ಕಂಡಿದ್ದು, ಅವರು ಕ್ಷಿಪ್ರದಲ್ಲೇ ಕರ್ನಾಟಕಕ್ಕೆ ಭೇಟಿಕೊಡಲು ಒಪ್ಪಿದರೆನ್ನಲಾಗಿದೆ

●

ಅಕ್ಕಿ ಕೀಖರಣೆ

ನವದೆಹಲಿ— ಕಾರಿಫ್ನ ಅಕ್ಕಿ ಕೀಖರಣೆಯು ಅರ್ಧ ಮಿಲಿಯ ಟನ್ನುಗಳಿಗೂ ಹೆಚ್ಚಾಗಿದ್ದು, ದಿನವೂ 19000 ಟ್ಗಳಷ್ಟು ರಾಷ್ಟ್ರದ ಆಹಾರಬುಟ್ಟಿಗೆ ಬೀಳುತ್ತಿದೆ

★

4000 ವರ್ಷಗಳ ಹಿಂದಿನ ಆಭರಣಗಳು

ರಷ್ಯಾ ಮಧ್ಯ ಏಷ್ಯಾದಲ್ಲಿ ಅಲ್ಟಿಂಡೀಪೇ ಪುರಾತನ ನಿವೇಶನದಲ್ಲಿ ಪಾಯ ತೋಡುತ್ತಿದ್ದಾಗ 4000 ವರ್ಷಗಳ ಕುಶಲ ಕೈಗಾರಿಕೆಯ ಅಮೂಲ್ಯ ರತ್ನಗಳ ಮತ್ತು ಭೃಂಗಾರದ ಆಭರಣಗಳು ಸಿಕ್ಕಿವೆ.

✾

ಸಹಾರಾ ಮರಳ್ಗಾಡಿನಲ್ಲಿ ರೈಲು

ಅಲ್ಜೀರಿಯಾ ಪಶ್ಚಿಮ ಭಾಗವನ್ನು ಮೆಡಿಟರೇನಿಯನ್ ತೀರಕ್ಕೆ ಕಬ್ಬಿಣ ಅದಿರು ಸಾಗಿಸಲು 1200 ಕೆಎಂ ರೈಲು ರಸ್ತೆಯನ್ನು ಸಹಾರಾ ಮರಳ್ಗಾಡು ಮೂಲಕ ನಿರ್ಮಿಸಲಾಗುವುದು

★

ಅಶ್ರುವಾಯು ಮತ್ತು ಲಾಠಿ ಪ್ರಯೋಗ

ಮೈಸೂರು— ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಶ್ರೀ ಗೋವರ್ಧನ ಅಂಕೋಲೇಕರರು ಪ್ರದರ್ಶಿಸಿರುವ ನಾನಾ ಕಡೆಗಳಲ್ಲಿನ ಗಣಪತಿಗಳ ಶ್ರೀಗಂಧದ ಆಕೃತಿಗಳನ್ನೂ, ಮೈಸೂರು ನಗರದಲ್ಲಿನ ವಿವಿಧ ಫೋಟೋಗಳನ್ನು ನೋಡಿ ಮೆಚ್ಚಿದ ಶ್ರೀ ಸ್ವಾಮಿಗಳವರು ಅವರಿಗೆ ರೂ 1000 ಕಾಣಿಕೆ ಇತ್ತು ಶಾಲನ್ನು ಹೊದಿಸಿ ಆಶೀರ್ವದಿಸಿದರು.

ಕೇಂದ್ರದ ನೆರವು

ನವದೆಹಲಿ– ಪ್ರವಾಹ ಮತ್ತು ಅಭಾವ ಪೀಡಿತ ರಾಜ್ಯಗಳಿಗೆ ವ್ಯವಸಾಯ ಸಲಕರಣೆ ಮತ್ತು ಸಾಮಗ್ರಿಗಳನ್ನು ಪಡೆಯಲು ಸರಕಾರ ರೂ 56 29 ಕೋಟಿ ಮಂಜೂರ್ಮಾಡಿದೆ.

★

ಮಂತ್ರಿಮಂಡಲ

ಬೆಂಗಳೂರು— ಮಂತ್ರಿಮಂಡಲಕ್ಕೆ ಸುರತ್ಕಲ್ಲಿನ ಶಾಸಕ ಶ್ರೀ ಸುಬ್ಬಯ್ಯ ಶೆಟ್ಟಿಯವರು ಮತ್ತು ಶ್ರವಣಬೆಳಗೊಳದ ಶಾಸಕ ಶ್ರೀ ಶ್ರೀಕಂಠಯ್ಯನವರನ್ನು ಸೇರಿಸಿಕೊಳ್ಳಲಾಗುವುದು – ಒಟ್ಟು 27 ಮಂತ್ರಿಗಳಾದರು

★

ಪವಿತ್ರ ಸ್ನಾನ

ಪುಷ್ಕರ್ (ರಾಜಸ್ಥಾನ)– ಶುಕ್ರವಾರ ಕಾರ್ತೀಕ ಪೂರ್ಣಿಮೆಯಂದು ಪುಷ್ಕರ ಸರೋವರದಲ್ಲಿ, ಅಳವಿಲ್ಲದ, ಮಣ್ಣಿನಿಂದ ಕೂಡಿದ ಆದರೆ ಪವಿತ್ರ ನೀರಿನಲ್ಲಿ 2 ಲಕ್ಷ ಯಾತ್ರಿಕರು ಸ್ನಾನಮಾಡಿದರು.

★

ಉಪಾಧ್ಯಾಯರುಗಳಿಗೆ ಸಂಬಳ ಸಿಕ್ಕಿಲ್ಲ

ಮೈಸೂರು— ರಂಜ್ಯದ ವಿವಿಧ ಸ್ಥಳಗಳಲ್ಲಿ ಅನೇಕ ಏಡೆಡ್ ಸ್ಕೂಲು ಮತ್ತು ಕಾಲೇಜುಗಳಲ್ಲಿ ಹಲವು ತಿಂಗಳುಗಳಿಂದ ಉಪಾಧ್ಯಾಯರುಗಳಿಗೆ ಸಂಬಳ ದೊರೆಯದಿರುವ ಬಗ್ಗೆ ಆ ಸಂಬಂಧದ ಸಂಘದ ಅಧ್ಯಕ್ಷ ಶ್ರೀ ಸತ್ಯನಾರಾಯಣರಾವ್ ಎಂ.ಎಲ್.ಸಿ ಕಳವಳ ವ್ಯಕ್ತಪಡಿಸಿದ್ದಾರೆ.

★

ಟೆಲಿಫೋನಿಗೆ ಕಾದಿರುವವರು

ಹುಬ್ಬಳ್ಳಿ— ದೇಶದಲ್ಲಿ ಹೊಸ ಟೆಲಿಫೋನು ಸಂಪರ್ಕಕ್ಕೆ 3 3 ಲಕ್ಷ ಜನರು ಕಾದಿರುವರೆಂದು ಕರ್ನಾಟಕ ಎಕ್ಸ್ಚೇಂಜ್ ಟೆಲಿಕಮ್ಯೂನಿಕೇಷನ್ ಅಧಿಕಾರಿಗಳು ತಿಳಿಸಿರುವರು.

ಡಾಕ್ಟರುಗಳ ಮುಷ್ಕರ

ಪಾಟ್ನಾ — ಸರಕಾರವು ತಮ್ಮ ಕೇಳಿಕೆಯನ್ನು ತಿರಸ್ಕರಿಸಿದ್ದರಿಂದ ಪ್ರತಿಭಟಿಸಿ ಬೀಹಾರಿನ ಸುಮಾರು 3000 ಡಾಕ್ಟರುಗಳು 1 ತಿಂಗಳ ಮುಷ್ಕರ ಪ್ರಾರಂಭಿಸಿದರು – ಜನವರಿ 1 ರಂದು ಸಾಮೂಹಿಕ ರಾಜೀನಾಮೆ ಕೊಡಲಿರುವರು

★

ಒಳ್ಳೇ ಯೋಜನೆ

ಬೆಂಗಳೂರು— ದಿಕ್ಕಿಲ್ಲದ ಮಹಿಳೆಯರು ಮತ್ತು ಮಕ್ಕಳ ಕಷ್ಟ ನಿವಾರಣೆಗೆ ಅನುಕೂಲವಾದ ಪ್ರಾಜೆಕ್ಟುಗಳನ್ನು ಸರಕಾರ ಯೋಜಿಸಿರುವದೆಂದು ತಿಳಿಸಲಾಗಿದೆ.

★

ಫಲಪುಷ್ಪ, ತೋಟಗಾರಿಕೆ

ಬೆಂಗಳೂರು— ಸರಕಾರದ ಫಲಪುಷ್ಪ ಮತ್ತು ತೋಟಗಾರಿಕೆ ಇಲಾಖೆ ಕೈಗಾರಿಕೆಯಲ್ಲವೆಂದು ಹೈಕೋರ್ಟು ತೀರ್ಪಿತ್ತಿದೆ.

★

ನಗರದಲ್ಲಿ 144 ನೇ ಸೆಕ್ಷನ್ ಜಾರಿ

ಮೈಸೂರು— ಪೋಲೀಸು ಬಂಧನದಲ್ಲಿದ್ದ ಒಬ್ಬನ, ಆಸ್ಪತ್ರೆಯಲ್ಲಿದ್ದ ಒಬ್ಬನ ಮರಣ ಸಂಬಂಧದಲ್ಲಿ ವಿಲಾದ್‌ಬಾಗ್‌ನಲ್ಲಿ ಭಾನುವಾರ ಹತೋಟಿ ಮೀರಿದ ಗುಂಪಿನ ಮೇಲೆ ಪೋಲೀಸರು ಲಾಠಿ ಮತ್ತು ಅಶ್ರುವಾಯು ಪ್ರಯೋಗಿಸಿದರು – ಶವಗಳನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಲಾಗಿತ್ತು –

– ನಗರದಲ್ಲಿ 7 ದಿನ 144 ಜಾರಿ ಮಾಡಲಾಗಿದೆ – ಇಬ್ಬರು ಕಾನಸ್ಟೆಬಲರು ಬಂಧಿಸಲ್ಪಟ್ಟು, ಸರ್ಕಲ್ ಇನ್ಸ್ಪೆಕ್ಟರ್ ಶ್ರೀ ಸದಾನಂದ ಸಸ್ಪೆಂಡು ಮಾಡಲ್ಪಟ್ಟಿದ್ದಾರೆ.

★

ನವದೆಹಲಿ– ರೈಲ್ವೆಗಳಿಗೆ 5 ನೇ ಯೋಜನೆಯಲ್ಲಿ ಬೇಕಾಗುವ ವ್ಯಾಗನ್‌ಗಳಲ್ಲಿ 50000 ಕ್ಕೆ ಆರ್ಡರ್‌ಕೊಡಲಾಗಿದೆ.

ಕನ್ನಡ ಅಭಿವೃದ್ಧಿ

ಬೆಂಗಳೂರು– 74–75 ರಲ್ಲಿ ಕನ್ನಡ ಅಭಿವೃದ್ಧಿ ಸ್ಕೀಂ ಕಾರ್ಯಕ್ರಮಕ್ಕೆ ಸರಕಾರ ರೂ. 11.99 ಲಕ್ಷ ಮಂಜೂರ್ಮಾಡಿದೆ.

✺

ಜೆ ಪಿ ಚಳವಳಿಗೆ ಸವಾಲು

ನವದೆಹಲಿ— ಜಯಪ್ರಕಾಶನಾರಾಯಣರ ಚಳವಳಿಯನ್ನು ಎದುರಿಸಲು ತಮ್ಮ ಪಾರ್ಟಿ ಬಲಗೊಳಿಸುವಂತೆ ರಾಜ್ಯಗಳ ಮುಖ್ಯ ಮಂತ್ರಿಗಳು ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳಿಗೆ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬರೂವಾ ಬರದಿರುವರು.

★

ಭಾರತಕ್ಕೆ ಗೋಧಿ

ವಾಷಿಂಗ್ಟನ್— ಭಾರತಕ್ಕೆ 3 ಲಕ್ಷ ಟ್ಗ ಗೋಧಿ ನಿಗದಿ ಮಾಡಲು ಅಮೇರಿಕಾದ ಆಹಾರ ಸಹಾಯ ಕಾರ್ಯಕ್ರಮದಲ್ಲಿ ನಿರ್ಧರಿಸಲಾಗಿದೆ.

★

ಚಳವಳಿಯಲ್ಲಿ ಜನಸಂಘ

ಜಮ್ಮು— ಡೆಲ್ಲಿ ಪ್ರದೇಶ, ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಪಂಜಾಬು ಮತ್ತು ಹರಿಯಾಣದಲ್ಲಿ ಸಹಕರಿಸಿ, ಮತ್ತು ಬೀಹಾರಿನಲ್ಲಿ ಜಯಪ್ರಕಾಶರ ಚಳವಳಿಯಲ್ಲಿ ಭಾಗವಹಿಸಿರುವ ತಂಡಗಳೊಡನೆ ಸೇರಿ, ತಕ್ಷಣ ಸಾಮೂಹಿಕ ಚಳವಳಿಗೆ ಸಿದ್ಧಗೊಳ್ಳುವಂತೆ ಅಲ್ಲಲ್ಲಿಯ ಜನಸಂಘ ಶಾಖೆಗಳಿಗೆ ಅಖಿಲ ಭಾರತ ಜನಸಂಘ ಕಾರ್ಯಕಾರಿ ಸಮಿತಿ ಸೂಚಿಸಿದೆ

★

ಷೇಕ್ ಅಬ್ದುಲ್ಲರು

ಜಮ್ಮು— ಬಂಧನದಲ್ಲಿರುವ ಕಳ್ಳ ಸಾಗಾಣಿಕೆಗಾರ ಹಾಜಿ ಮಸ್ತಾನ್‌ರಿಗೂ ಷೇಕ್ ಅಬ್ದುಲ್ಲರಿಗೂ ಹತ್ತಿರ ಸಂಪರ್ಕವಿರುವದೆಂದು ಜನಸಂಘ ನಾಯಕ ಶ್ರೀ ವಾಜಪೇಯಿ ಆಪಾದಿಸಿರುವರು.

ಜಯಪ್ರಕಾಶರಿಂದ ನೇತ್ರದಾನ

ಪಾಟ್ನಾ— ಸರ್ವೋದಯ ನಾಯಕರೂ, ಅಖಿಲಭಾರತ ನೇತ್ರ ನಿಧಿ ಅಧ್ಯಕ್ಷರೂ ಆದ ಜಯಪ್ರಕಾಶ ನಾರಾಯಣರು ತಮ್ಮ ನಿಧನಾ ನಂತರ ತಮ್ಮ ಕಣ್ಣುಗಳನ್ನು ನೇತ್ರನಿಧಿಗೆ ದಾನಾ ಮಾಡಲು ನಿರ್ಧರಿಸಿರುವುದಾಗಿ ಪತ್ರಿಕೆಯವರಿಗೆ ತಿಳಿಸಿದರು – ನೇತ್ರ ನಿಧಿ ಅಧ್ಯಕ್ಷತೆಯನ್ನು ತಾವು ಬಿಡುವುದಾಗಿಯೂ ತಿಳಿಸಿಗರು.

ಮತ್ತೆ ಚಳುವಳಿ

ಅಹಮದಾಬಾದು— ಗುಜರಾತು ರಾಜ್ಯದಲ್ಲಿ ಜಿನಾಭ್ಯಾ ನೇತೃತ್ವದ ಮಂತ್ರಿ ಮಂಡಲವನ್ನು ಓಡಿಸಲೂ ಮತ್ತು ಅಲ್ಲಿಯ ಶಾಸನಸಭಾ ವಿಸರ್ಜಿಸಲು ನವನಿರ್ಮಾಣ ಯುವಕ ಸಮಿತಿ ಪ್ರಾರಂಭಿಸಿದ್ದ ಚಳುವಳಿಯು ಶ್ರೀ ಜಯಪ್ರಕಾಶ ನಾರಾಯಣರ ಕರೆಯಂತೆ ಕೇಂದ್ರ ಸರಕಾರದ ವಿರುದ್ಧ ರಾಜ್ಯಾದ್ಯಂತ ಚಳವಳಿಯು ಪುನರ್ಜೀವಿಸಲ್ಪಡುವುದು.

ಅಧಿಕಾರಿಗಳ ಸಸ್ಪೆಂಡ್

ಮಡಕೇರಿ— ಒಬ್ಬ ಪ್ರಾದೇಶಿಕ ಸಾರಿಗೆ ಅಧಿಕಾರಿ ಮತ್ತು ಒಬ್ಬ ತಾಸಿಲ್ದಾರರನ್ನು ವಿಜಿಲೆನ್ಸ್ ಕಮಿಷ್ನರ್ ಮಾಡಿದ ಆಪಾದನೆಗಾಗಿ ಸಸ್ಪೆಂಡುಮಾಡಲಾಗಿದೆ.

ದಿವ್ಯವಾಣಿ

ಪ್ರಜಾರಾಜ್ಯ ಸ್ಥಾಪಿಸಲು ನೀವು ಕ್ರಾಂತಿ ಹೊಂದಲಾರಿರಿ ; ಕ್ರಾಂತಿಗೆ ನೀವು ಪ್ರಜಾರಾಜ್ಯ ಹೊಂದಿರಬೇಕು — ಚೆಸ್ಟರ್ ಬೌಲ್ಸ್

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Quality Printing Neat Binding

Lakshminarasimha Press

Sivarampet, Mysore 1

Protect the Cow

Help The Gorakshana

— Humanitarian Propoganda Monthly....

ವುಡ್‌ಲಾಂಡ್ 29 11 74 ರಿಂದ

ಅಮೋಘ 4 ನೇ ವಾರ

ರಾಜೇಶ್ ಖನ್ನ, ಜೀನತ್ ಅಮಾನ್,
ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ
ಅಪೂರ್ವ ಈಸ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ – ಆರ್. ಡಿ. ಬರ್ಮನ್ ನಿರ್ದೇಶನ – ಶಕ್ತಿ ಸಾಮಂತ್

ದಿನ ೧೧ ಪ್ರದರ್ಶನಗಳು

ಅ ಪೆ ರಾ 29 11 74 ರಿಂದ

ಪಾತಾಳ ಭೈರವಿ

ಎನ್ ಟಿ ರಾಮರಾವ್ ರೇಲಂಗಿ ಗಿರಿಜ ಇವರ ಅಭಿನಯದಿಂದ ಕೂಡಿದ
ಅಮೋಘ ತೆಲುಗು ಚಿತ್ರ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Contribute Liberally

to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore